# ನಾಡೋಜ ಡಾ. ಏಣಗಿ ಬಾಳಪ್ಪ ಸ್ಮರಣಾರ್ಥ ಆಯೋಜಿಸಿದ್ದ ದತ್ತಿ ಉದ್ಘಾಟನೆ ಉದ್ಘಾಟನಾ ಸಮಾರಂಭ




ಧಾರವಾಡ : ಹಿರಿಯ ರಂಗಕರ್ಮಿ ಏಣಗಿ ಬಾಳಪ್ಪನವರು ಶತಮಾನದ ಸಾಕ್ಷಿ ಪುರುಷ. ಕನ್ನಡ ರಂಗಭೂಮಿಯ 'ದ್ರುವತಾರೆ' ಎಂದು ಹಿರಿಯ ಸಾಹಿತಿ ಡಾ. ವೀರಣ್ಣ ರಾಜೂರ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ ೨೭–೪–೨೦೧೮ ರಂದು "ವಿಶ್ವರಂಗಭೂಮಿ ದಿನಾಚರಣೆ" ಅಂಗವಾಗಿ ನಾಡೋಜ ಡಾ. ಏಣಗಿ ಬಾಳಪ್ಪ ಸ್ಮರಣಾರ್ಥ ಆಯೋಜಿಸಿದ್ದ ದತ್ತಿ ಉದ್ಘಾಟನೆ, ಶಾಂತೇಶ ವಾಚನಾಲಯಕ್ಕೆ ೫ ಕೃತಿಗಳ ಸಮರ್ಪಣೆ ಹಾಗೂ ರಂಗಗೌರವ ಸಮಾರಂಭವನ್ನು ದೀಪ ಬೆಳಗಿಸುವದರೊಂದಿಗೆ ಉದ್ಘಾಟಿಸಿ ಮಾತನಾಡಿ, 'ಬಾಳಪ್ಪನವರು "ರಂಗಭೂಮಿಯ ನಡೆದಾಡುವ ವಿಶ್ವಕೋಶ"ದಂತಿದ್ದರು. ರಂಗ ಗೀತೆಗಳ ಕಣಜವಾದ ಅವರು ಕನ್ನಡ ನಾಡು ಸಂಸ್ಕೃತಿಯ ಏಳ್ಗೆಗಾಗಿ ರಂಗಭೂಮಿಯ ಮೂಲಕ ಅಪಾರ ಕೊಡುಗೆ ನೀಡಿದ ರಂಗಭೂಮಿಯ ಸವ್ಯಸಾಚಿ ಎಂದು ಕರೆಯಲಾಗಿದೆ.

ಅವರು ಕ್ರಾಂತಿಯೋಗಿ ಬಸವೇಶ್ವರ ನಾಟಕವು ವೃತ್ತಿರಂಗಭೂಮಿಯಲ್ಲಿ ಬಾಳಪ್ಪನವರ ಹೆಸರು ಚಿರಸ್ಥಾಯಿಯಾಗಿ ಉಳಿಸುವಂತೆ ಮಾಡಿದ್ದು ಒಂದು ದಾಖಲೆ. ಪ್ರತಿ ಪಾತ್ರವನ್ನು ಅನುಭವಿಸಿ ಅಭಿನಯಿಸುವ ಕಲೆ ಅವರಲ್ಲಿ ಕರಗತವಾಗಿತ್ತು. ರಂಗ ಸನ್ಯಾಸ ಸ್ವೀಕರಿಸಿದ ಬಾಳಪ್ಪನವರು ತಮ್ಮ ಸಂಸಾರವನ್ನು ಹಾಗೂ ರಂಗ ಸಂಸಾರವನ್ನು ಸಮಚಿತ್ತದಿಂದ ಕಂಡವರಾಗಿದ್ದರು. ಭಾರತದ ಸ್ವಾತಂತ್ರ್ಯ ಹೋರಾಟಗಾರರಿಗೆ ಅವರ ನಾಟಕ ಕಂಪನಿಯು ಆಶ್ರಯ ನೀಡಿತ್ತು. ಹೋರಾಟಗಾರರಿಗೆ ಬಾಳಪ್ಪನವರು ಸ್ಫೂರ್ತಿ ತುಂಬಿದ ಮಹಾನ್ ಕಲಾವಿದರಾಗಿದ್ದರು ಎಂದು ತಿಳಿಸಿದರು.

ರಂಗ ಚಿಂತಕರಾದ ಡಾ. ಬಸವರಾಜ ಜಗಜಂಪಿ ರಂಗ ಚಿಂತನೆ ಮಾಡಿ, "ಏಣಗಿ ಬಾಳಪ್ಪನವರು ತಮ್ಮ ವೃತ್ತಿ ಬದುಕಿನ ಬಹುತೇಕ ಕಾಲವನ್ನು ಚಿಕ್ಕೋಡಿ ಶಿವಲಿಂಗ ಸ್ವಾಮಿಗಲಲ್ಲಿ ಕಳೆದವರಾಗಿದ್ದರು. ಬಾಳಪ್ಪನವರು ಅವರನ್ನು ಗುರು ಸದೃಶರಾಗಿಯೇ ಕಂಡರು. ಜೀವನದಲ್ಲಿ ಎದುರಾದ ಅನೇಕ ಸಮಸ್ಯೆಗಳನ್ನು ಮೆಟ್ಟಿನಿಂತ ಸಾಧನೆ ಮಾಡಿದ ಮಹಾನ ಸಾಧಕರು. ರಂಗ ಗೀತೆಗಳನ್ನು ಧ್ವನಿಸುರುಳಿ ಮಾಡಿಸಿ, ಮುಂದಿನ ತಲೆಮಾರಿಗೂ ಅನುಕೂಲವಾಗಬೇಕೆಂಬ ಹೆಬ್ಬಯಕೆ ಹೊಂದಿದ್ದರು. ಬಾಳಪ್ಪನವರು ತಮ್ಮ ವೃತ್ತಿ ಬದುಕಿನಲ್ಲಿ ಅನೇಕ ನೋವುಗಳನ್ನು ಉಂಡರೂ ಕಲಾ ರಸಿಕರಿಗೆ ಮಾತ್ರ ನಲಿವು ನೀಡಿದವರಾಗಿದ್ದರು. ಕರ್ನಾಟಕವಷ್ಟೇ ಅಲ್ಲಾ ಮಹಾರಾಷ್ಟ್ರದಲ್ಲಿಯೂ ಸಹ ಇವರ ನಾಟಕಗಳು ಹೆಚ್ಚು ಪ್ರಸಿದ್ಧಿ ಹೊಂದಿದ್ದವು. ಸರಕಾರ ಇಂತಹ ಮೇರು ನಟನಿಗೆ ಪದ್ಮಶ್ರೀ, ಕರ್ನಾಟಕ ರತ್ನ ಪ್ರಶಸ್ತಿ ನೀಡಿ ಗೌರವಿಸದಿರುವುದು ವಿಷಾದನೀಯ ಎಂದು ತಿಳಿಸಿದರು.

ಇನ್ನೋರ್ವ ರಂಗಚಿಂತಕ ಡಾ. ರಾಮಕೃಷ್ಣ ಮರಾಠೆ ಮಾತನಾಡಿ, ಉತ್ತರ ಕರ್ನಾಟಕದ ಸಾಂಸ್ಕೃತಿಕ ಮನಸುಗಳು ಹಾಗೂ ಜನ ಪ್ರತಿನಿಧಿಗಳು ಏಣಗಿ ಬಾಳಪ್ಪನವರ ಹೆಸರಿನಲ್ಲಿ ರಂಗ ಮಂದಿರ ನಿರ್ಮಾಣ ಮಾಡದಿರುವುದು ಖೇದಕರ. ಬಾಳಪ್ಪನವರು ನಮ್ಮ ಸಮಾಜದ ದೊಡ್ಡ ಆಸ್ತಿ, ರಂಗ ಗೀತೆಗಳು ತಮ್ಮ ಜೀವನದ

ಉಸಿರು ಎಂದು ನಂಬಿದ ಅವರು ೩೦೦ ರಂಗ ಗೀತೆಗಳನ್ನು ಧ್ವನಿ ಸುರುಳಿ ಮಾಡಿಸಿ ರಂಗಭೂಮಿಗೆ ಅಪೂರ್ವ ಕೊಡುಗೆ ನೀಡಿದರು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಡಾ. ಪಾಟೀಲ ಪುಟ್ಟಪ್ಪ ಮಾತನಾಡಿ, ಬಾಲ ನಟನಾಗಿ ಸ್ತ್ರೀ ಪಾತ್ರದಾರಿಯಾಗಿ, ಗಾಯಕರಾಗಿ ಅವರಂತೆ ಅಭಿನಯಿಸಿದ ಮತ್ತೊಬ್ಬ ಕಲಾವಿದರಿಲ್ಲ, ಅವರ ರಂಗ ಯಾತ್ರೆಯ ಶಿಖರ ತಲುಪಿಸಿದ ಕಥೆ ರೋಮಾಂಚನ, ಬಾಳಪ್ಪನವರು ಕಲಾವೈಭವ ನಾಟಕದ ಕಂಪನಿಯನ್ನು ವೈಯಕ್ತಿಕ ಲಾಭಕ್ಕಾಗಿ ಕಟ್ಟದೇ ಕಲಾಸೇವೆಗಾಗಿ ಕಟ್ಟಿದ ಸಾರ್ಥಕ ಪುರುಷ ಎಂದರು.

ಹಿರಿಯ ರಂಗಕಲಾವಿದೆಯರಾದ ಬಳ್ಳಾರಿಯ ನಾಡೋಜ ಡಾ. ಸುಭದ್ರಮ್ಮ ಮನ್ಸೂರ ಏಣಗಿ ಬಾಳಪ್ಪ ಪ್ರತಿಷ್ಠಾನ ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ರಂಗಗೌರವ ಸ್ವೀಕರಿಸಿ ಮಾತನಾಡಿ, 'ಬಾಳಪ್ಪನವರ ಕಲಾವೈಭವ ನಾಟ್ಯ ಸಂಘದ ಮೂಲಕ ನನಗೆ ಬಣ್ಣದ ಬದುಕು ಕಟ್ಟಿಕೊಳ್ಳಲು ಸಾಧ್ಯವಾಯಿತು. ನನ್ನ ಬೆಳವಣಿಗೆಗೆ ಏಣಗಿ ಬಾಳಪ್ಪನಂತವರೇ ಕಾರಣ. ಅವರ ಅನುಗ್ರಹ ಮಾರ್ಗದರ್ಶನದಿಂದಲೇ ನಾನೊಬ್ಬ ಕಲಾವಿದೆಯಾಗಿ ರೂಪಗೊಳ್ಳಲು ಕಾರಣವಾಯಿತೆಂದು ಭಾವುಕತೆ ವ್ಯಕ್ತಪಡಿಸಿ ರಂಗಗೀತೆ ಪ್ರಸ್ತುತಪಡಿಸಿದರು.

ಏಣಗಿ ಬಾಳಪ್ಪ ಪ್ರತಿಷ್ಠಾನವು ಕ.ವಿ.ವ.ಸಂಘದ ಶಾಂತೇಶ ವಾಚನಾಲಯಕ್ಕೆ ಬಾಳಪ್ಪನವರ ಜೀವನಚರಿತ್ರೆಯ ೫ ಕೃತಿ ಸಮರ್ಪಿಸಿತು. ಟ್ರಸ್ಟ್ ವತಿಯಿಂದ ಸಂಘದ ಪದಾಧಿಕಾರಿಗಳನ್ನು, ಗಣ್ಯರನ್ನು ಸನ್ಮಾನಿಸಲಾಯಿತು. ಬಾಳಪ್ಪನವರ ಭಾವಚಿತ್ರಕ್ಕೆ ಗಣ್ಯರು ಪುಷ್ಪನಮನದೊಂದಿಗೆ ಗೌರವ ಸಲ್ಲಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಬಾಳಪ್ಪನವರ ರಂಗಜೀವನದ ಸ್ಮರಣೀಯ ದಿನಗಳ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಸವರಾಜ ಕುಪ್ಪಸಗೌಡರ ನಿರೂಪಿಸಿದರು. ಸತೀಶ ತುರಮರಿ ವಂದಿಸಿದರು.

ಕಾರ್ಯಕ್ರಮದಲ್ಲಿ ಏಣಗಿ ಬಾಳಪ್ಪನವರ ಜೀವನ ಹಾಗೂ ಸಾಧನೆ ಕುರಿತು ಕೃತಿ ರಚಿಸಿದ ಪ್ರೊ. ಕೃಷ್ಣಮೂರ್ತಿ ಚಂದರ್, ಡಾ. ಗೋಪಾಲ ಮಹಾಮುನಿ, ಗಣೇಶ ಅಮೀನಗಡ, ಡಾ. ಬಸವರಾಜ ಏಣಗಿ, ಲಕ್ಷ್ಮೀಬಾಯಿ ಏಣಗಿ, ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ, ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಕಾ.ಕಾ. ಸಮಿತಿ ಸದಸ್ಯ ಮನೋಜ ಪಾಟೀಲ, ಎಸ್. ಬಿ. ಗಾಮನಗಟ್ಟಿ, ಡಾ. ಬಾಳಣ್ಣ ಶೀಗೀಹಳ್ಳಿ, ಉಪನ್ಯಾಸಕ ವೀರಣ್ಣ ಒಡ್ಡೀನ, ಬಿ.ಎಸ್. ಶಿರೋಳ, ಬಸವರಾಜ ಬೆಂಗೇರಿ, ಮಾರ್ಕಂಡೇಯ ದೊಡಮನಿ, ರಾಜೇಂದ್ರ ಸಾವಳಗಿ ಹಾಗೂ ಬಾಳಪ್ಪನವರ ಅಭಿಮಾನಿಗಳು, ಏಣಗಿ ಗ್ರಾಮದ ಹಿರಿಯರು, ಪ್ರತಿಷ್ಠಾನದ ಸದಸ್ಯರು, ಏಣಗಿ ಪರಿವಾರದವರು ಸೇರಿದಂತೆ ಅನೇಕರು ಭಾಗವಹಿಸಿದ್ದರು.

**ವರದಿ : ಕೃಷ್ಣ ಜೋಶಿ**
ಕೋಶಾಧ್ಯಕ್ಷರು ಹಾಗೂ
ಮಾರ್ಚ ತಿಂಗಳ ದತ್ತಿ ಕಾರ್ಯಕ್ರಮಗಳ ಸಂಯೋಜಕರು